<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಬಂಗಾರಪೇಟೆ</u>

**ಸಿಸಿ ಸಂಖ್ಯೆ:2283/2023** ಚಾಸಾ:1 ಪ್ರಾಸಾ:1

<u>ಸಾಕ್ಷಿಯನ್ನು ದಿ:24.01.2025 ರಂದು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು</u>

| | |
|---|---|
| ಹೆಸರು : | ಜ್ಯೋತಿ |
| ಗಂಡನ ಹೆಸರು: | ಬಾಬು |
| ವಯಸ್ಸು: | 40 ವರ್ಷ |
| ವೃತ್ತಿ: | ಟೈಲರ್ |
| ವಾಸ ಸ್ಥಳ: | ಒಂಭತ್ತುಗುಳಿ ಗ್ರಾಮ, ಬಂಗಾರಪೇಟೆ ತಾಲ್ಲೂಕು. |

<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ಅರೋಪಿ ಪರಿಚಯ. ಚಾಸಾ.2 ಸ್ನೇಹಿತೆ , ಚಾಸಾ.3 ನನ್ನ ಅಣ್ಣ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಆ ದಾಖಲೆಯು ಪಿರ್ಯಾದಿ ಆಗಿದ್ದು, ಅದನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಆ ದಾಖಲೆಯು ಸ್ಥಳ ಪಂಚನಾಮೆ ಆಗಿದ್ದು, ಅದನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ದಿ: 22.06.2023 ರಂದು ಬೆಳಿಗ್ಗೆ 11.30 ಗಂಟೆಗೆ ನಾನು ಒಂಭತ್ತುಗುಳಿಯಿಂದ ಕೆಲಸಕ್ಕೆಂದು ಬಂಗಾರಪೇಟೆ ಕಡೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಅರೋಪಿ ಬಂಗಾರಪೇಟೆಯಿಂದ ಒಂಭತ್ತುಗುಳಿ ಕಡೆ ಬರುತ್ತಿದ್ದಾಗ ನನ್ನನ್ನು ಅಡ್ಡ ಹಾಕಿದ. ಅರೋಪಿಯು ನನ್ನನ್ನು ಕುರಿತು ಏ ಸೂಳೇಮುಂಡೆ ನಿನ್ನದು ಜಾಸ್ತಿಯಾಯಿತು, ಯಾಕೆ ನನ್ನ ಜೊತೆ ಮಾತನಾಡುತ್ತಿಲ್ಲವೆಂದು ಅವ್ಯಾಚ್ಯ ಶಬ್ದಗಳಿಂದ ಬೈದ. ನಾನು ಏಕೆ ಬೈಯುದ್ದೀಯಾ ಎಂದು ಕೇಳಿದಾಗ ಅರೋಪಿ ತನ್ನ ಕೈಗಳಿಂದ ನನ್ನ ಹೊಟ್ಟೆಗೆ ಹೊಡೆದ. ಅರೋಪಿ ಅಲ್ಲಿಯೇ ಬಿದ್ದಿದ್ದ ಒಂದು ಕೋಲನ್ನು ತೆಗೆದುಕೊಂಡು ನನ್ನ ಎರಡು ಭುಜಕ್ಕೆ ಮತ್ತು ತಲೆಗೆ ಹೊಡೆದು ಊತ ಗಾಯ ಪಡಿಸಿದ. ನನ್ನ ಚೂಡಿದಾರ್ ನ್ನು ಎಳೆದು ಹಾಕಿದ ನಾನು ಕೆಳಕ್ಕೆ ಬಿದ್ದು ನನ್ನ ಎಡಕಾಲಿಗೆ ತರಚಿದ ಗಾಯವಾಗಿತ್ತು. ನನ್ನ ಚೂಡಿದಾರ್ ಹರಿದು ಹೋಯಿತು. ಅರೋಪಿ ನೀನು ನನ್ನ ಜೊತೆ ಮಾತನಾಡದಿದ್ದರೆ ಸಾಯಿಸಿ ಬಿಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ. ಚಾಸಾ.2 ರವರು ಸ್ಥಳಕ್ಕೆ ಬಂದು ಬಂಗಾರಪೇಟೆಯ ಸರ್ಕಾರಿ ಆಸ್ಪತ್ರೆಗೆ ಒಂದು ಆಟೋವಿನಲ್ಲಿ ಕರೆದುಕೊಂಡು ಬಂದರು.

ಚಾಸಾ.3 ರವರು ಆಸ್ಪತ್ರೆಗೆ ಬಂದು ನಾನು ಅವರಿಗೆ ಎಲ್ಲಾ ವಿಷಯವನ್ನು ತಿಳಿಸಿದೆ. ಮರುದಿನ ಪೋಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡರು.

ಮರುದಿನ ಸಂಜೆ 4.30 ರಿಂದ 5.30 ರವರೆಗೆ ಚಾಸಾ.4 ಮತ್ತು ಚಾಸಾ.5 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ನಿಪಿ.2 ರಂತೆ ಮಹಜರ್ ಮಾಡಿ ಒಂದು ಕೋಲು ಮತ್ತು ಬಟ್ಟೆಯನ್ನು ಅಮಾನತ್ತುಪಡಿಸಿಕೊಂಡರು. ನ್ಯಾಯಾಲಯದ ಮುಂದಿರುವ ಒಂದು ಕೋಲು ಮತ್ತು ಬಟ್ಟೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳು ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೊಂಡಿದ್ದು ಎಂದು ಹೇಳಿದ್ದು , ಬಟ್ಟೆಗಳನ್ನು ಮು.ಮಾ.1 ಎಂದು , ಕೋಲನ್ನು ಮು.ಮಾ.2 ಎಂದು ಗುರುತಿಸಲಾಯಿತು. ಈ ಸಂಬಂಧ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಆ ದಾಖಲೆಯು ಕಲಂ.164 ರ ಭಾ.ದಂ.ಸಂ.ಪ್ರ ಅಡಿಯಲ್ಲಿ ಹೇಳಿಕೆ ಆಗಿದ್ದು, ಅದನ್ನು ನಿಪಿ.3 ಎಂದು, ಅದರಲ್ಲಿರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯ ಪಾಟೀ ಸವಾಲನ್ನು ಮುಚ್ಚಿದ ನ್ಯಾಯಾಲಯದಲ್ಲಿ (ಇನ್ ಕ್ಯಾಮರಾ) ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ ಶ್ರೀ. ಕೆ.ಎಂ., ಆರೋಪಿ ಪರ ವಕೀಲರಿಂದಃ**

ಆರೋಪಿ ಐನೋರಹೊಸಹಳ್ಳಿ ಗ್ರಾಮ ಎಂದರೆ ಸರಿ. ನಾನು ಒಂಬತ್ತುಗುಳಿ ವಾಸಿ ಎಂದರೆ ಸರಿ. ಐನೋರಹೊಸಹಳ್ಳಿಯಿಂದ ಒಂಭತ್ತುಗುಳಿ ಗ್ರಾಮ ಸುಮಾರು ಅರ್ಧ ಕಿ.ಮೀ ಅಂತರವಿದೆ. ನಾನು ಆರೋಪಿಯ ಜೊತೆ ಸಲಿಗೆಯಿಂದ ಮಾತನಾಡುತ್ತಿದ್ದೆ. ಆರೋಪಿಯ ಕೈ ಚಳಕವಿತ್ತು. ಆರೋಪಿ ಕಾರ್ ಪೆಂಟರ್ ಕೆಲಸ ಮಾಡುತ್ತಿದ್ದಾಗ ನನಗೂ ಮತ್ತು ಅವರಿಗೂ ಸಂಬಂಧವಾಯಿತು. ನನಗೂ ಆರೋಪಿಗೂ 7 ವರ್ಷಗಳ ಸಂಬಂಧವಿದೆ. ನಾನು ಆರೋಪಿಯ ಬ್ಯಾಂಕಿನ ಖಾತೆಯಿಂದ 50 ಲಕ್ಷ ರೂಗಳನ್ನು ತೆಗೆದುಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣ ಕೊಡುವಂತೆ ಪೀಡಿಸುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಕಷ್ಟಪಟ್ಟು ಆರೋಪಿಗೆ 5 ರಿಂದ 6 ಲಕ್ಷ ರೂಗಳನ್ನು ಕೊಟ್ಟಿನೆದ್ದೆಂದು ನುಡಿಯುತ್ತಾರೆ. ನಾನು ಆರೋಪಿಗೆ ದುಡ್ಡು ಕೊಟ್ಟಿರುವ ವಿಷಯವನ್ನು ನನ್ನ ದೂರಿನಲ್ಲಾಗಲೀ ಮತ್ತು ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡುವಾಗಲೂ ಹೇಳಿಲ್ಲ.

ನಾನು ಹೈದರಾಬಾದಿಗೆ ಹೋದಾಗ ಅರೋಪಿ ನನ್ನನ್ನು ಕರೆದುಕೊಂಡು ಬಂದಿದ್ದ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಬಂಗಾರಪೇಟೆ ಬಂದಾಗ 11.30 ಗಂಟೆಗೆ ಆಗಿತ್ತು. ಅರೋಪಿಯ ದ್ವಿಚಕ್ರ ವಾಹನ ಸಂಖ್ಯೆ ನನಗೆ ಗೊತ್ತಿಲ್ಲ. ಐನೋರಹೊಸಹಳ್ಳಿ ಹೋಗಬೇಕಾದರೆ ಬ್ರಿಡ್ಜ್ ನ ಪಕ್ಕದ ದಾರಿಯಲ್ಲಿ ಹೋಗಬೇಕು ಎಂದರೆ ಸರಿ. ಸದರಿ ಜಾಗವೂ ಜನಸಂದಣಿ ಪ್ರದೇಶ ಎಂದರೆ ಸರಿ. ಅಲ್ಲಿ ಮಟನ್ ಅಂಗಡಿಗಳು ಇದೆ ಎಂದರೆ ಸರಿ. ಅಲ್ಲಿ ವಾಹನಗಳು ಹೋಗುವುದು ಬರುವುದು ಸಹಜ ಎಂದರೆ ಸರಿ. ಸಹಜವಾಗಿ ಆ ದಾರಿಯಲ್ಲಿ ವಾಹನಗಳನ್ನು ನಿಲ್ಲಿಸುವುದು ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದಾಗ ಯಾವ ಸಾರ್ಜನಿಕರು ಇರಲಿಲ್ಲ. ಘಟನೆ ನಡೆದಾಗ ನಾನು ಒಬ್ಬಳೇ ಇದ್ದೆ. ಅರೋಪಿಯು ಹೊರಟು ಹೋದ ಮೇಲೆ ಚಾಸಾ.2 ಮತ್ತು ಇತರರು ಬಂದರು. ನನ್ನ ಆಸ್ಪತ್ರೆಗೆ ಕರೆದುಕೊಂಡು ಆಟೋವಿನ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಆಗಿದ್ದೆ.

ನಾನು ಠಾಣೆಗೆ ದೂರು ನೀಡಿಲ್ಲ. ಪೋಲೀಸರೇ ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡರು. ಮು.ಮಾ.1 ನ್ನು ನಾನು ಆಸ್ಪತ್ರೆಯಿಂದ ಮನೆಗೆ ಹೋಗಿ ಅಲ್ಲಿಂದ ಪೋಲೀಸರಿಗೆ ಕೊಟ್ಟೆ. ಮು.ಮಾ.2 ನ್ನು ಸ್ಥಳದಲ್ಲೇ ಅಮಾನತ್ತುಪಡಿಸಿಕೊಂಡರು. ಆಸ್ಪತ್ರೆಯಿಂದ ಎಷ್ಟು ಹೊತ್ತಿಗೆ ಬಿಡುಗಡೆಯಾದೆ ಎಂದು ನನಗೆ ಗೊತ್ತಿಲ್ಲ. ನಿಪಿ.1 ನ್ನು ಆಸ್ಪತ್ರೆಯಲ್ಲಿ ಓದಿದ್ದೇನೆ. ಕೃತ್ಯ ನಡೆದ ಸ್ಥಳದ ಚೆಕ್ಕುಬಂದಿಯನ್ನು ನನಗೆ ಹೇಳಲಾಗುವುದಿಲ್ಲ. ಚಾಸಾ.4 ಮತ್ತು ಚಾಸಾ.5 ರವರನ್ನು ಪೋಲೀಸರೇ ಕರೆದುಕೊಂಡು ಬಂದಿರುತ್ತಾರೆ.

ಮು.ಮಾ.2 ಸಾಮಾನ್ಯವಾಗಿ ಎಲ್ಲಿ ಕಡೆ ಸಿಗುತ್ತವೆ ಎಂದರೆ ಸರಿ. ಮು.ಮಾ.1 ಮತ್ತು ಮು.ಮಾ.2 ರ ಮೇಲೆ ನನ್ನ ಮತ್ತು ಪಂಚರ ಸಹಿ ಇರುವುದಿಲ್ಲ ಎಂದರೆ ಸರಿ. ಮು.ಮಾ.1 ನನ್ನದೇ ಎಂದು ತೋರಿಸಲು ಯಾವುದೇ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ಅರೋಪಿಗೂ ಜಗಳವಾಗಿಲ್ಲ ಎಂದರೆ ಸರಿಯಲ್ಲ. ಮಹಜರ್ ಮಾಡಿಲ್ಲ ಎಂದರೆ

ಸರಿಯಲ್ಲ. ನಾನು , ಚಾಸಾ.2 ಮತ್ತು ನನ್ನ ಅಣ್ಣ ಸೇರಿ ಅರೋಪಿಯ ವಿರುದ್ಧ ಇನ್ನೂ 20 ಲಕ್ಷ ರೂಗಳನ್ನು ಬೇಡಿಕೆ ಇಟ್ಟು ಕೊಡದ ಕಾರಣ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಬಂಗಾರಪೇಟೆ.